# ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್
# ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ,
ಲಕ್ಷ್ಮೀಪುರಂ, ಮೈಸೂರು-೫೭೦೦೦೪
ದೂರವಾಣಿ: (೦೮೨೧) ೨೩೩೨೭೦೩, ಫ್ಯಾಕ್ಸ್: ೨೪೦೨೧೧೪

J.L.B.Road, Near Ashoka Circle,
Lakshmipuram, Mysore - 570 004.
Ph.Off:0821-2332703, Fax No: 2402114
mail:musicuniversitymys@gmail.com


ದಿನಾಂಕ:30.03.2023ರ ಬೆಳಗ್ಗೆ 11:30 ಗಂಟೆಗೆ ನಡೆದ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 41 ನೇ ಪ್ರಶಾಸನ ಸಭೆಯ ನಡಾವಳಿಗಳು.

<u>ಸಭೆಯಲ್ಲಿ ಹಾಜರಿದ್ದವರು:</u>

| ಕ್ರ.ಸಂ | ಹೆಸರು ಮತ್ತು ವಿಳಾಸ | ಪದನಾಮ |
|---|---|---|
| 01. | **ಪ್ರೊ. ನಾಗೇಶ್ ವಿ. ಬೆಟ್ಟಕೋಟೆ**<br>ಮಾನ್ಯ ಕುಲಪತಿಗಳು<br>ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್<br>ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು | ಅಧ್ಯಕ್ಷರು |
| 02. | **ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು**<br>ಆರ್ಥಿಕ ಇಲಾಖೆ, ವಿಧಾನ ಸೌಧ, ಅಂಬೇಡ್ಕರ್ ಬೀದಿ, ಬೆಂಗಳೂರು – 560001 ಇವರ ಪರವಾಗಿ **ಶ್ರೀಮತಿ ಉಮಾ .ಕೆ**<br>ಸರ್ಕಾರದ ಉಪ ಕಾರ್ಯದರ್ಶಿಯವರು, ಆಥಿಕ ಇಲಾಖೆ<br>**ಆನ್‌ಲೈನ್ ಮುಖಾಂತರ** | ಸದಸ್ಯರು |
| 03 | **ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು**<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ),<br>ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ಬೀದಿ, ಬೆಂಗಳೂರು –560001<br>ಇವರ ಪರವಾಗಿ **ಶ್ರೀ ನರಸಿಂಹಪ್ಪ**<br>ಸರ್ಕಾರದ ಉಪ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ<br>**ಆನ್‌ಲೈನ್ ಮುಖಾಂತರ** | ಸದಸ್ಯರು |
| 04. | **ಡಾ. ರವೀಂದ್ರ ಕಟೋಟಿ**<br>ಪ್ರಶಾಸನಾ ಸಭಾ ಸದಸ್ಯರು<br>#209, ಅದ್ವೈತ ವಿಬ್ರಂತ್, 93/ಡಿ ಡಿಜಿಟಲ್ ಪಾರ್ಕ್ ರಸ್ತೆ<br>ಯಶವಂತಪುರ ಇಂಡಸ್ಟ್ರಿಯಲ್ ಸಬ್‌ಹರ್ಬ್,<br>ಬೆಂಗಳೂರು – 560 022<br>**ಆನ್‌ಲೈನ್ ಮುಖಾಂತರ** | ಸದಸ್ಯರು |
| 05. | **ಪ್ರೊ. ಟಿ.ಎಸ್.ದೇವರಾಜ**<br>**ಕುಲಸಚಿವರು**<br>ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು. | ಸದಸ್ಯ ಕಾರ್ಯದರ್ಶಿ |

ಕುಲಸಚಿವರು ಸಭೆಗೆ ಭೌತಿಕವಾಗಿ ಮತ್ತು ಆನ್ ಲೈನ್ ಮೂಖಾಂತರ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಯವರಲ್ಲಿ ಮನವಿ ಮಾಡಿದರು.

ಕುಲಪತಿಯವರು ಸದಸ್ಯರೆಲ್ಲರಿಗು ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

| ವಿಷಯ |
|---|
| **ವಿಷಯಸಂಖ್ಯೆ 1:** ದಿನಾಂಕ:22.12.2022 ರಂದು ಜರುಗಿದ ವಿಶ್ವವಿದ್ಯಾಲಯದ 40ನೇ ಪ್ರಶಾಸನ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.<br><br>ಈ ಸಂದರ್ಭದಲ್ಲಿ ಕುಲಪತಿಯವರು ಮಾತನಾಡಿ ಇತರೆ ವಿಶ್ವವಿದ್ಯಾಲಯಗಳಂತೆ ನಮ್ಮ ವಿಶ್ವವಿದ್ಯಾಲಯದಲ್ಲಿ ಕಾಲೇಜುಗಳ ಸಂಯೋಜನಾ ವ್ಯವಸ್ಥೆ ಇರುವುದಿಲ್ಲ. ಹೀಗಾಗಿ ವಿಶ್ವವಿದ್ಯಾಲಯವು ನಡೆಸುವ ಸಾಂಪ್ರದಾಯಿಕ ಕೋರ್ಸುಗಳಾದ ಸಂಗೀತ, ನೃತ್ಯ ಮತ್ತು ಪ್ರದರ್ಶಕ ಕಲೆಗಳನ್ನು ನಡೆಸುವ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಸರ್ಟಿಫಿಕೇಟ್, ಡಿಪ್ಲೊಮಾ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸುವ ಸಲುವಾಗಿ ಪರಿನಿಯಮಗಳನ್ನು ರಚಿಸಿ ಹಿಂದಿನ ಪ್ರಶಾಸನ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಕುಲಾಧಿಪತಿಗಳ ಅಂಕಿತ ಪಡೆಯುವ ಸಲುವಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿತ್ತು. ಸದರಿ ಪ್ರಸ್ತಾವನೆಗೆ ಕುಲಾಧಿಪತಿಗಳು ದಿನಾಂಕ: 27.03.2023 ರಂದು ಅಂಕಿತ ನೀಡಿರುತ್ತಾರೆ ಎಂದು ಸರ್ಕಾರವು ದಿನಾಂಕ:29.03.2023 ರ ಪತ್ರದಲ್ಲಿ ತಿಳಿಸಿರುತ್ತದೆ.. ಇನ್ನು ಮುಂದೆ ವಿಶ್ವವಿದ್ಯಾಲಯ ಸದರಿ ಕೋರ್ಸುಗಳನ್ನು ನಡೆಸುವುದರಿಂದ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಿಶ್ವವಿದ್ಯಾಲಯದ ಕೀರ್ತಿ ಹೆಚ್ಚುವುದಲ್ಲದೆ ಸಂಪನ್ಮೂಲ ಕ್ರೂಢೀಕರಣಗೊಂಡು ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಶ್ರೀಮತಿ ಉಮಾ ಕೆ ಸರ್ಕಾರದ ಉಪಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಇವರು ಹರ್ಷ ವ್ಯಕ್ತಪಡಿಸಿ ವಿಶ್ವವಿದ್ಯಾಲಯದ ಬೆಳವಣಿಗೆ ಆಗಲೆಂದು ಆಶಿಸಿದರು.<br><br>**ನಿರ್ಣಯ: ಚರ್ಚೆಯ ನಂತರ ದಿನಾಂಕ: 22.12.2022 ರಂದು ಜರುಗಿದ ವಿಶ್ವವಿದ್ಯಾಲಯದ 40ನೇ ಪ್ರಶಾಸನ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.** |
| **ವಿಷಯ ಸಂಖ್ಯೆ 2:** ದಿನಾಂಕ:06.03.2023 ರಂದು ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.<br><br>ಕುಲಪತಿಯವರು ಮಾತನಾಡಿ ಇದೇ ವಿಷಯವನ್ನು ದಿನಾಂಕ: 29.03.2023 ರಂದು ನಡೆದ ಹಣಕಾಸು ಸಮಿತಿಯ ಸಭೆಯಲ್ಲಿ ಮಂಡಿಸಿದ್ದು ಅಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡಂತೆ ಕ್ರಮವಹಿಸಬಹುದಾಗಿದೆ ಎಂದು ತಿಳಿಸಿದರು. ಶ್ರೀಮತಿ ಉಮಾ ಕೆ, ಸರ್ಕಾರದ ಉಪ ಕಾರ್ಯದರ್ಶಿ ಆರ್ಥಿಕ ಇಲಾಖೆ ಇವರು ಮಾತನಾಡಿ ಹಣಕಾಸು ಸಮಿತಿ ಸಭೆಯ ನಿರ್ಣಯದಂತೆ ವಿಶ್ವವಿದ್ಯಾಲಯದ ಹೆಸರಿನಲ್ಲಿ ನಿವೇಶನವಿದ್ದರೆ ಮಾತ್ರ ಕಟ್ಟಡ ಕಾಮಗಾರಿ ಕೈಗೊಳ್ಳಬಹುದು ಎಂದು ವಿವರಿಸಿದರು.<br><br>**ನಿರ್ಣಯ: ಚರ್ಚೆಯ ನಂತರ ಪ್ರಸ್ತುತ ಇರುವ ಕಟ್ಟಡದ ನಿವೇಶನದಲ್ಲಿ ಸರ್ಕಾರದ ಅನುಮತಿ ಪಡೆದು ಕಟ್ಟಡಗಳನ್ನು ನಿರ್ಮಿಸಬಹುದಾಗಿದೆ ಎಂದು ನಿರ್ಣಯಿಸಿ ಸದ್ಯಕ್ಕೆ ಅಗತ್ಯವಿರುವ ರಿಪೇರಿ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಪ್ರಶಾಸನ ಸಮಿತಿಯು ನಿರ್ಣಯಿಸಿತು.** |
| **ವಿಷಯ ಸಂಖ್ಯೆ 3:** ಹೊಸದಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿರುವ ಮೈಸೂರು ನಗರದ ಪೋಲಿಸ್ ಬಡಾವಣೆ (ಸರ್ದಾರ್ ವಲ್ಲಭಬಾಯಿ ಪಟೇಲ್ ನಗರ) ಯಲ್ಲಿ ನಾಗರೀಕ ಸೌಕರ್ಯ ನಿವೇಶನ ಸಂಖ್ಯೆ ಸಿಎ–09ರಲ್ಲಿರುವ ಸಂಪೂರ್ಣ ನಿವೇಶನಕ್ಕೆ ವಿಶ್ವವಿದ್ಯಾಲಯದ |

ಕಟ್ಟಡಗಳನ್ನು ನಿರ್ಮಾಣ ಮಾಡಲು DPR ಮತ್ತು Master Plan ತಯಾರಿಸಲು ಇ-ಟೆಂಡರ್ ಕರೆಯುವ ಪ್ರಸಾವನೆ ಬಗ್ಗೆ.

**ನಿರ್ಣಯ: ಈಗಾಗಲೆ ದಿನಾಂಕ: 29.03.2023 ರ ಹಣಕಾಸು ಸಮಿತಿಯ ಸಭೆಯಲ್ಲಿ ನಿರ್ಣಯಿಸಿದಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹೊಸದಾಗಿ ಮಂಜೂರಾಗಿರುವ ಮೈಸೂರು ನಗರದ ಪೋಲಿಸ್ ಬಡಾವಣೆ (ಸರ್ದಾರ್ ವಲ್ಲಭಬಾಯಿ ಪಟೇಲ್ ನಗರ) ಯಲ್ಲಿ ನಾಗರೀಕ ಸೌಕರ್ಯ ನಿವೇಶನ ಸಂಖ್ಯೆ ಸಿಎ-09ರಲ್ಲಿರುವ ಸಂಪೂರ್ಣ ನಿವೇಶನಕ್ಕೆ ವಿಶ್ವವಿದ್ಯಾಲಯದ ಕಟ್ಟಡಗಳನ್ನು ನಿರ್ಮಾಣ ಮಾಡಲು DPR ಮತ್ತು Master Plan ತಯಾರಿಸಲು ಇ-ಟೆಂಡರ್ ಕರೆಯಲು ಸಭೆಯು ಅನುಮೋದಿಸಿತು.**

ವಿಷಯ ಸಂಖ್ಯೆ 4: ಪರೀಕ್ಷಾ ವಿಭಾಗದ ಪ್ರಸ್ತಾವನೆ ಅನುಮೋದನೆ ಪಡೆದುಕೊಳ್ಳುವ ಬಗ್ಗೆ

**ನಿರ್ಣಯ: ಶ್ರೀಮತಿ ನಯನಾ ಶಿವರಾಮ್,ಅತಿಥಿ ಉಪನ್ಯಾಸಕರು,ಇವರು ದಿನಾಂಕ:10.11.2022 ರಿಂದ 21.12.2022 ರ ರಜಾ ಅವಧಿಯಲ್ಲಿ ಪರೀಕ್ಷಾ ಕೆಲಸ ಕಾರ್ಯಗಳನ್ನು ನಿರ್ವಹಿಸಿರುವುದಕ್ಕೆ ಸೂಕ್ತ ಗೌರವಧನವನ್ನು ಪಾವತಿಸಲು ನಿಯಮಗಳಲ್ಲಿ ಅವಕಾಶವಿಲ್ಲವೆಂದು ಹಣಕಾಸು ಸಮಿತಿಯಲ್ಲಿ ನಿರ್ಣಯಿಸಿರುವುದರಿಂದ ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಲು ಸಾಧ್ಯವಿಲ್ಲವೆಂದು ಪ್ರಶಾಸನ ಸಭೆಯು ನಿರ್ಣಯಿಸಿತು. ಮುಂದುವರೆದು ಅಂಕಪಟ್ಟಿಗಳು ಮತ್ತು ಘಟಿಕೋತ್ಸವದ ಪರೀಕರಗಳನ್ನು ನಿಯಮಾನುಸಾರ ಖರೀದಿಸಲು ಸಭೆಯು ಅನುಮೋದಿಸಿತು.**

ವಿಷಯ ಸಂಖ್ಯೆ 5: 2022-23 ನೇ ಸಾಲಿನಲ್ಲಿ ಜರುಗಿದ ಎಲ್ಲಾ BOS ಮತ್ತು BOE ಸಭೆಗಳ ನಿರ್ಣಯಗಳನ್ನು ಅನುಮೋದಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ 2022-23ನೇ ಶೈಕ್ಷಣಿಕ ಸಾಲಿನ ಚಟುವಟಿಕೆಗಳು ಈಗಾಗಲೇ ಪ್ರಾರಂಭವಾಗಿದ್ದು ಅದಕ್ಕೆ ಸಂಬಂಧಿಸಿದ ಪರೀಕ್ಷೆಗಳನ್ನು ನಡೆಸಲು ಈ ಕೆಳಕಂಡ ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಗಳು ಸಭೆಗಳನ್ನು ನಡೆಸಿ ನಿರ್ಣಯ ಕೈಗೊಂಡಿರುತ್ತವೆ. ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಸದರಿ ನಿರ್ಣಯಗಳಿಗೆ ಪ್ರಶಾಸನ ಸಮಿತಿಯ ಅನುಮೋದನೆ ಅಗತ್ಯವಾಗಿರುತ್ತದೆ ಎಂದು ತಿಳಿಸಿದರು.

| ಕ್ರ. ಸಂ. | ದಿನಾಂಕ ಮತ್ತು ಸಮಯ | ವಿಷಯ |
|---|---|---|
| 1 | 08.03.2023<br>ಮಧ್ಯಾಹ್ನ 02:00 ಗಂಟೆ | ಭರತನಾಟ್ಯ ಮತ್ತು ನಾಟಕ ವಿಭಾಗಗಳ ಅಧ್ಯಯನ ಮಂಡಳಿ ನಿರ್ಣಯಗಳು . |
| 2 | 08.03.2023<br>ಮಧ್ಯಾಹ್ನ 03:30 ಗಂಟೆ | ಭರತನಾಟ್ಯ ಮತ್ತು ನಾಟಕ ವಿಭಾಗಗಳ ಪರೀಕ್ಷಾ ಮಂಡಳಿ ನಿರ್ಣಯಗಳು. |
| 3 | 27.03.2023<br>ಬೆಳಿಗ್ಗೆ 11:00 ಗಂಟೆ | ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ವಿಭಾಗಗಳ ಅಧ್ಯಯನ ಮಂಡಳಿ ನಿರ್ಣಯಗಳು. |
| 4 | 27.03.2023<br>ಅಪರಾಹ್ನ 12:00 ಗಂಟೆ | ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ವಿಭಾಗಗಳ ಪರೀಕ್ಷಾ ಮಂಡಳಿ ನಿರ್ಣಯಗಳು. |
| 5 | 23.01.2023 | ಭಾಷಾ ವಿಷಯಗಳ ಅಧ್ಯಯನ ಮಂಡಳಿ ನಿರ್ಣಯಗಳು |
| 6 | 27.03.2023 | ಭಾಷಾ ವಿಷಯಗಳ ಪರೀಕ್ಷಾ ಮಂಡಳಿ ನಿರ್ಣಯಗಳು |

**ನಿರ್ಣಯ: ಚರ್ಚೆಯ ನಂತರ ಮೇಲ್ಕಂಡ ಅಧ್ಯಯನ ಮಂಡಳಿಗಳು ಮತ್ತು ಪರೀಕ್ಷಾ ಮಂಡಳಿಗಳು ವಿವಿಧ ದಿನಾಂಕಗಳಂದು ನಡೆಸಿದ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿ ಸಭೆಯು ಅನುಮೋದಿಸಿತು.**

**ವಿಷಯ ಸಂಖ್ಯೆ: 6** ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ (ಹಳೆಯ ಪಠ್ಯಕ್ರಮದಂತೆ )ಬಿ.ಎ ವಿದ್ಯಾರ್ಥಿಗಳ ಬಾಕಿ ಉಳಿದ ಪರೀಕ್ಷಾ ಪತ್ರಿಕೆಗಳಿಗೆ ಪರೀಕ್ಷೆ ನಡೆಸಲು ಕೊನೆಯ ಅವಕಾಶಕ್ಕಾಗಿ ಮನವಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಂಬಂಧ ಪ್ರಶಾಸನ ಸಭೆಯ ಅನುಮೋದನೆ ಪಡೆದು ಪ್ರಶಿಕ್ಷಣ ಸಮಿತಿ ಘಟನೋತ್ತರ ಅನುಮೋದನೆ ಕೋರುವ ಬಗ್ಗೆ.

ಕುಲಪತಿಗಳು ಮಾತನಾಡಿ 2022-23ನೇ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನ್ವಯ ಹೊಸ ವಿನಿಯಮಗಳು (Regulations) ಜಾರಿಗೆ ಬಂದಿದ್ದು ಅದರನ್ವಯ ಪಠ್ಯಕ್ರಮಗಳನ್ನು ರಚಿಸಲಾಗಿದೆ. ಈ ಹಿಂದೆ ಚಾಲ್ತಿಯಲ್ಲಿದ್ದ CBCS ವಿನಿಯಮಗಳು 2022-23ನೇ ಸಾಲಿಗೆ ಅಂತ್ಯಗೊಳ್ಳುತ್ತವೆ. CBCS ಪದ್ಧತಿಯಲ್ಲಿ 2017-18ನೇ ಸಾಲಿನಲ್ಲಿ ಪ್ರವೇಶ ಪಡೆದುಕೊಂಡಿದ್ದ ಕೆಲವೊಂದು ವಿದ್ಯಾರ್ಥಿಗಳು ಕೆಲವೊಂದು ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದು ಪದವಿಗಳನ್ನು ಪೂರೈಸಿಕೊಳ್ಳಲು ನಿಗದಿ ಪಡಿಸಿದ್ದ ಅವಧಿಯಲ್ಲಿ ಉತ್ತೀರ್ಣರಾಗಿರುವುದಿಲ್ಲ. ಹೀಗಾಗಿ ಮತ್ತೊಮ್ಮೆ ಪರೀಕ್ಷೆಗಳನ್ನು ಬರೆಯಲು ಅವಕಾಶ ಕಲ್ಪಿಸುವಂತೆ ಕೋರಿ ಮನವಿಗಳನ್ನು ಸಲ್ಲಿಸಿರುತ್ತಾರೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮಾರ್ಗದರ್ಶನಗಳನ್ವಯ ವಿದ್ಯಾರ್ಥಿಗಳು ನಿಗದಿತ ಅವಧಿಯಲ್ಲಿ ಪದವಿಗಳನ್ನು ಪೂರೈಸದಿದ್ದಲ್ಲಿ ಸಮರ್ಥನೆಯೊಂದಿಗೆ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲು ತಿಳಿಸಿದೆ. ಈಗ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನ್ವಯ ಹೊಸ ವಿನಿಯಮಗಳು (Regulations) ಜಾರಿಗೆ ಬಂದಿರುವುದರಿಂದ ಹಳೆಯ ವಿದ್ಯಾರ್ಥಿಗಳು ಹೊಸನಿಯಮಗಳಲ್ಲಿ ಪರೀಕ್ಷೆಗಳನ್ನು ಬರೆಯಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಹಳೆಯ CBCS ಪದ್ಧತಿಯಡಿ ಪ್ರವೇಶ ಪಡೆದು ಪದವಿ ಪೂರೈಸದ ವಿದ್ಯಾರ್ಥಿಗಳಿಗೆ ಒಂದು ಬಾರಿ ವಿಶೇಷ ಪ್ರಕರಣದಲ್ಲಿ ಅನುಮತಿ ನೀಡಲು ಕುಲಪತಿಗಳು ಸಭೆಯಲ್ಲಿ ಮನವಿ ಮಾಡಿದರು.

**ನಿರ್ಣಯ: ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನ್ವಯ ಹೊಸ ವಿನಿಯಮಗಳು (Regulations) ಜಾರಿಗೆ ಬಂದಿರುವುದರಿಂದ ಹಳೆಯ ವಿದ್ಯಾರ್ಥಿಗಳು ಹೊಸನಿಯಮಗಳಲ್ಲಿ ಪರೀಕ್ಷೆಗಳನ್ನು ಬರೆಯಲು ಅವಕಾಶವಿಲ್ಲದಿರುವುದರಿಂದ ಹಳೆಯ CBCS ಪದ್ಧತಿಯಡಿ ಪ್ರವೇಶ ಪಡೆದು ಪದವಿ ಪೂರೈಸದ ವಿದ್ಯಾರ್ಥಿಗಳಿಗೆ ಒಂದು ಬಾರಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಪರೀಕ್ಷೆಗಳನ್ನು ಬರೆಯಲು ಅವಕಾಶ ಕಲ್ಪಿಸಲು ಪ್ರಶಾಸನ ಸಮಿತಿಯ ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 7** ದಿನಾಂಕ: 29.03.2023ರ ಬೆಳಗ್ಗೆ 11.30 ಗಂಟೆಗೆ ನಡೆದ ವಿಶ್ವವಿದ್ಯಾಲಯದ 27ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವುದು.

ಕುಲಪತಿಯವರು ದಿನಾಂಕ: 29.03.2023ರಂದು ನಡೆದ ಹಣಕಾಸು ಸಮಿತಿಯ ನಡಾವಳಿಗಳನ್ನು ಪ್ರಶಾಸನ ಸಭೆಯ ಮುಂದೆ ಮಂಡಿಸಿ ಅನುಮೋದನೆ ಕೋರಿದರು. ಮುಂದುವರೆದು 2023-24ನೇ ಸಾಲಿನ ಹಣಕಾಸು ವರ್ಷಕ್ಕೆ ಆಯ-ವ್ಯಯ ಬಜೆಟ್ ಮಂಡನೆ ಮಾಡುವಾಗ ಅತಿಥಿ ಉಪನ್ಯಾಸಕರುಗಳ ವೇತನಕ್ಕೆ ಅಂದಾಜು 80 ಲಕ್ಷಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

ಆದರೆ ಸಂಗೀತ, ನೃತ್ಯ ಮತ್ತು ಪ್ರದರ್ಶಕ ಕಲೆಗಳಲ್ಲಿ ಅದ್ವಿತೀಯ ಸಾಧನೆ ಮಾಡಿರುವ ಸಂಪನ್ಮೂಲ ವ್ಯಕ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ಉಪನ್ಯಾಸಗಳನ್ನು ಕೊಡಿಸಲು ಹಾಗೂ ಕಾರ್ಯಾಗಾರ/ವಿಚಾರಸಂಕೀರ್ಣ ನಡೆಸುವ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವ ಸಂಭಾವನೆಯನ್ನು ನೀಡುವ ಸಲುವಾಗಿ ಪ್ರತ್ಯೇಕವಾಗಿ 10 ಲಕ್ಷರೂ ಗಳನ್ನು ಮೀಸಲಿಡಬೇಕೆಂದು ಕೋರಿದರು. ಸದರಿ ಪ್ರಸ್ತಾವನೆಗೆ ಪ್ರಶಾಸನ ಸಭೆಯು ಒಪ್ಪಿಗೆ ನೀಡಿತು.

**ನಿರ್ಣಯ: ಸಂಗೀತ, ನೃತ್ಯ ಮತ್ತು ಪ್ರದರ್ಶಕ ಕಲೆಗಳಲ್ಲಿ ಅದ್ವಿತೀಯ ಸಾಧನೆ ಮಾಡಿರುವ ಸಂಪನ್ಮೂಲ ವ್ಯಕ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ಉಪನ್ಯಾಸಗಳನ್ನು ಕೊಡಿಸಲು ಹಾಗೂ ಕಾರ್ಯಾಗಾರ/ವಿಚಾರ ಸಂಕೀರ್ಣ ನಡೆಸುವ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವ ಸಂಭಾವನೆಯನ್ನು ನೀಡಲು 10 ಲಕ್ಷರೂಗಳನ್ನು ಬಜೆಟ್ ನಲ್ಲಿ ಸೇರಿಸಿಕೊಳ್ಳಲು ಅನುಮೋದನೆ ನೀಡುವುದರ ಜೊತೆಗೆ ದಿನಾಂಕ: 29.03.2023ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯು ಅನುಮೋದಿಸಿತು.**

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

*. ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದ ನಿರ್ಣಯಗಳನ್ನು ಹೊರತು ಪಡಿಸಿ ಉಳಿದೆಲ್ಲಾ ನಿರ್ಣಯಗಳಿಗೆ ಅನುಪಾಲನ ಕ್ರಮವನ್ನು ಚುನಾವಣಾ ನೀತಿ ಸಂಹಿತೆ ಮುಗಿದ ನಂತರ ತೆಗೆದುಕೊಳ್ಳುವುದಾಗಿ ನಿರ್ಣಯಿಸಲಾಗಿದೆ.

ಕುಲಸಚಿವರು
ಸದಸ್ಯ ಕಾರ್ಯದರ್ಶಿ
ಹಣಕಾಸು ಸಮಿತಿ

ಕುಲಪತಿ
ಅಧ್ಯಕ್ಷರು
ಹಣಕಾಸು ಸಮಿತಿ